# <u>ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ದೇವದುರ್ಗ.</u>

**<u>ಸಿ.ಸಿ ನಂಬರ್ಃ 1212/2022</u>**

**ಪಿರ್ಯಾದಿ** ಃ ಸರ್ಕಾರದ ಪರವಾಗಿ ದೇವದುರ್ಗ **ಪೊಲೀಸರು,**
**ದೇವದುರ್ಗ** ತಾಲ್ಲೂಕು.

**ವಿರುದ್ದ**

ಆರೋಪಿತರು ಃ 1. ಲಕ್ಷ್ಮಿ ಗಂಡ ಮಾನಪ್ಪ, 40 ವರ್ಷ,
2. ಆಂಜನೇಯ್ಯ ತಂದೆ ಮಾನಪ್ಪ, 19 ವರ್ಷ,
3. ಕೀರಲಿಂಗ @ ಕೀರಲಿಂಗಸ್ವಾಮಿ ತಂದೆ ಮಾನಪ್ಪ, 30 ವರ್ಷ,
4. ಶಿವಲಿಂಗಮ್ಮ @ ಸಿದ್ದಲಿಂಗಮ್ಮ ಗಂಡ ರಂಗಯ್ಯ, 26 ವರ್ಷ,
5. ನಾಗಮ್ಮ ಗಂಡ ತಿಪ್ಪಣ್ಣ, 25 ವರ್ಷ,
6. ಪದ್ದಮ್ಮ @ ಪದ್ಮವತಿ ಗಂಡ ಕೀರಲಿಂಗ, 25 ವರ್ಷ,
ಎಲ್ಲರೂ ತೆಗ್ಗಿಹಾಳ ಗ್ರಾಮ, ತಾಃ ದೇವದುರ್ಗ, ಜಿಃ ರಾಯಚೂರು.

## <u>ದೋಷಾರೋಪಣೆ</u>

<u>ಶ್ರೀ</u> **ರಫೀಕ್ ಅಹ್ಮದ್** ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ, **ದೇವದುರ್ಗ,** ಆದ ನಾನು ಈ ಕೆಳಗಿನ **ದೋಷಾರೋಪಣೆ**ಯನ್ನು ನಿಮ್ಮ ಮೇಲೆ ಹೊರಿಸುವುದೇನಂ **ದರೆ,**

1. ಸಾಕ್ಷಿ ನಂಬರ 14 ನೇದ್ದವರಿಗೆ ಆರೋಪಿತರು ಸೇರಿಕೊಂಡು ಮನೆ ಬಿಟ್ಟು ಹೋಗು ಅಂತಾ ತೊಂದರೆ ನೀಡುತ್ತಿದ್ದುದ್ದರಿಂದ, ಸಾಕ್ಷಿ ನಂಬರ 14 ನೇದ್ದವರು, ತನ್ನ ಸ್ವಂತ ಅಕ್ಕಳಾದ ಸಾಕ್ಷಿ ನಂಬರ 13 ನೇದ್ದವರಲ್ಲಿ, ಹೋಗಿ ವಾಸವಾಗಿದ್ದು, ಸಾಕ್ಷಿ ನಂಬರ 14 ನೇದ್ದವರನ್ನು ಸಾಕ್ಷಿ ನಂಬರ 13 ನೇದ್ದವರು ಮನೆಯಲ್ಲಿ ಇಟ್ಟುಕೊಂಡಿದ್ದರ ಬಗ್ಗೆ ಆರೋಪಿತರು ಸಾಕ್ಷಿ ನಂಬರ 13 ನೇದ್ದವರೊಂದಿಗೆ ಹಾಗೂ ಸಾಕ್ಷಿ ನಂಬರ 13 ನೇದ್ದವರ ಸ್ವಂತ ತಂಗಿಯಾದ ಸಾಕ್ಷಿ ನಂಬರ 4 ನೇದ್ದವರೊಂದಿಗೆ ದ್ವೇಷವನ್ನು ಇಟ್ಟುಕೊಂಡಿದ್ದು, ದಿನಾಂಕ 28/7/2022 ರಂದು ಮದ್ಯಾಹ್ನ 1–30 ಗಂಟೆಗೆ ಆರೋಪಿ ನಂಬರ 1



ರಿಂದ 6 ನೇದ್ದವರು ಅಕ್ರಮವಾಗಿ ಗುಂಪುಕಟ್ಟಿಕೊಂಡು, ದೊಂಬಿ ಮಾಡಿಕೊಂಡು ಬಂದಿದ್ದು. ಆ ಮೂಲಕ ನಿಮ್ಮ ಮೇಲೆ ಭಾ ದಂ ಸಂ ಕಲಂ **143 ಸಹವಾಚಕ 149** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿದ್ದು ಈ ನ್ಯಾಯಾಲಯದ ಸಂಜ್ಞೇಯತೆಯಲ್ಲಿ ಇರುತ್ತದೆ.

2. ಮೇಲ್ಕಂಡ ದಿನ ಸಮಯ ಹಾಗೂ ಸ್ಥಳದಲ್ಲಿ ಆರೊಪಿಗಳಾದ ನೀವುಗಳು ಸಮಾನ ಉದ್ದೇಶದಿಂದ ಬಂದು ಆರೋಪಿತರೆಲ್ಲರೂ ಜಗಳ ಮಾಡುವ ಸಮಾನ ಉದ್ದೇಶದಿಂದ ಅಕ್ರಮವಾಗಿ ಗುಂಪುಕಟ್ಟಿಕೊಂಡು ಬಂದಿದ್ದು, ಆ ಮೂಲಕ ನಿಮ್ಮ ಮೇಲೆ ಭಾ ದಂ ಸಂ ಕಲಂ **147 ಸಹವಾಚಕ 149** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿದ್ದು ಈ ನ್ಯಾಯಾಲಯದ ಸಂಜ್ಞೇಯತೆಯಲ್ಲಿ ಇರುತ್ತದೆ.

3. ಮೇಲ್ಕಂಡ ದಿನ ಸಮಯ ಹಾಗೂ ಸ್ಥಳದಲ್ಲಿ ಆರೊಪಿಗಳಾದ ನೀವುಗಳು ಸಮಾನ ಉದ್ದೇಶದಿಂದ ಬಂದು ಆರೋಪಿತರೆಲ್ಲರೂ ಸಮಾನ ಉದ್ದೇಶದಿಂದ ಅಕ್ರಮವಾಗಿ ಗುಂಪುಕಟ್ಟಿಕೊಂಡು ಬಂದು ಸಾಕ್ಷಿ 1, 4 ಮತ್ತು 5 ರವರನ್ನು ಮುಂದೆ ಹೋಗದಂತೆ ಅಕ್ರಮವಾಗಿ ತಡೆದು ನಿಲ್ಲಿಸಿದ್ದು. ಆ ಮೂಲಕ ನಿಮ್ಮ ಮೇಲೆ ಭಾ ದಂ ಸಂ ಕಲಂ **341** **ಸಹವಾಚಕ** **149** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿದ್ದು ಈ ನ್ಯಾಯಾಲಯದ ಸಂಜ್ಞೇಯತೆಯಲ್ಲಿ ಇರುತ್ತದೆ.

4. ಮೇಲ್ಕಂಡ ದಿನ ಸಮಯ ಹಾಗೂ ಸ್ಥಳದಲ್ಲಿ ಆರೊಪಿಗಳಾದ ನೀವುಗಳು ಸಮಾನ ಉದ್ದೇಶದಿಂದ ಬಂದು ಅವರ ಪೈಕಿ ಆರೋಪಿ ನಂಬರ್ 1, 4 ರಿಂದ 6 ನೇದ್ದವರು ಸಾಕ್ಷಿ ನಂಬರ್ 4 ನೇದ್ದವರಿಗೆ ಲೇ ಸೂಳೆ ನಮ್ಮ ಊರಿಗೆ ನೀನು ಯಾಕೆ ಬಂದಿದ್ದೀಯಾ ಅಂತಾ ಅವಾಚ್ಯ ಶಬ್ದಗಳಿಂದ ಬೈದಿದ್ದು. ಆ ಮೂಲಕ ನಿಮ್ಮ ಮೇಲೆ ಭಾ ದಂ ಸಂ ಕಲಂ **504** **ಸಹವಾಚಕ** **149** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿದ್ದು ಈ ನ್ಯಾಯಾಲಯದ ಸಂಜ್ಞೇಯತೆಯಲ್ಲಿ ಇರುತ್ತದೆ.

5. ಮೇಲ್ಕಂಡ ದಿನ ಸಮಯ ಹಾಗೂ ಸ್ಥಳದಲ್ಲಿ ಆರೋಪಿಗಳಾದ ನೀವುಗಳು ಅಕ್ರಮವಾಗಿ ಗುಂಪುಕಟ್ಟಿಕೊಂಡು ಸಮಾನ ಉದ್ದೇಶದಿಂದ ಬಂದು, ಆ ಪೈಕಿ ಆರೋಪಿ ನಂಬರ್ 1, 4 ರಿಂದ 6 ನೇದ್ದವರು ಸಾಕ್ಷಿ ನಂಬರ್ 4 ನೇದ್ದವರಿಗೆ ತಮ್ಮ ಕೈಯಿಂದ ಹೊಡೆ ಬಡೆ ಮಾಡಿದ್ದು, ಸಾಕ್ಷಿ ನಂಬರ್



1 ನೇದ್ದವರಿಗೆ 2 ಮತ್ತು 3 ನೇ ಆರೋಪಿತರು ಸೇರಿಕೊಂಡು ಕೈಯಿಂದ ಹೊಡೆ ಬಡೆ ಮಾಡಿದ್ದು, ಸಾಕ್ಷಿ ನಂಬರ್ 5 ನೇದ್ದವರಿಗೆ ಆರೋಪಿ ನಂಬರ್ 4 ರಿಂದ 6 ಸೇರಿಕೊಂಡು ಕೈಯಿಂದ ಹೊಡೆಡ ಬಡೆ ಮಾಡಿದ್ದು, ಆ ಮೂಲಕ ನಿಮ್ಮ ಮೇಲೆ ಭಾ ದಂ ಸಂ ಕಲಂ **323** **ಸಹವಾಚಕ** **149** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿದ್ದು ಈ ನ್ಯಾಯಾಲಯದ ಸಂಜ್ಞೇಯತೆಯಲ್ಲಿ ಇರುತ್ತದೆ.

6. ಮೇಲ್ಕಂಡ ದಿನ ಸಮಯ ಹಾಗೂ ಸ್ಥಳದಲ್ಲಿ ಆರೊಪಿಗಳಾದ ನೀವುಗಳು ಸಮಾನ ಉದ್ದೇಶದಿಂದ ಬಂದು, ಇನ್ನೊಂದು ಸಾರಿ ತಮ್ಮ ಕೈಯಲ್ಲಿ ಸಿಕ್ಕರೆ ಜೀವ ಸಹಿತ ಬಿಡುವುದಿಲ್ಲಾ, ಅಂತಾ ಜೀವದ ಬೆದರಿಕೆ ಹಾಕಿದ್ದು. ಆ ಮೂಲಕ ನಿಮ್ಮ ಮೇಲೆ ಭಾ ದಂ ಸಂ ಕಲಂ 506 **ಸಹವಾಚಕ** **149** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿದ್ದು ಈ ನ್ಯಾಯಾಲಯದ ಸಂಜ್ಞೇಯತೆಯಲ್ಲಿ ಇರುತ್ತದೆ.

ದಿನಾಂಕ **11.06.2025**
ಸ್ಥಳ **ದೇವದುರ್ಗ**

(ಶ್ರೀ **ರಫೀಕ್ ಅಹ್ಮದ್** )
ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
**ದೇವದುರ್ಗ.**